ನೌಕರಿಗೆ ಸೇರಿಕೊಂಡು ಮುಂದಕ್ಕೆ ಅನುಕೂಲವಾದಾಗ ಓದು ಮುಂದುವರೆಸಿದರೆ ಹೇಗೆ? ಅಂತೂ ಮನೆಯವರಿಗೆ ತಾನು ಇನ್ನು ಭಾರವಾಗಬಾರದು. ತನ್ನ ಮೇಲಂತೂ ಹೆತ್ತವರು ಹಾಗೂ ತನ್ನ ತಂಗಿ ಎಲ್ಲ ಭರವಸೆಯನ್ನು ಇಟ್ಟುಕೊಂಡಿದ್ದಾರೆ. ಇನ್ನು ಅವರನ್ನು ನಿರಾಶೆಗೆ ತಳ್ಳಬಾರದು ಎಂದುಕೊಂಡ.

ಎಷ್ಟು ಸಲುಗೆ ಇದ್ದರೂ ನೇರವಾಗಿ ವಿವಾಹದ ಪ್ರಸ್ತಾಪ ಎತ್ತಲು ಶಶಿಕಾಂತ ಹಿಂಜರಿದ. ಅವಳ ಮನಸ್ಸಿನಲ್ಲಿ ಏನಿದೆಯೋ? ಇಷ್ಟು ವರ್ಷಗಳಿಂದ ತನ್ನ ಬಗ್ಗೆ ಎಲ್ಲ ವಿವರ ತಿಳಿದ ಅವಳ ಹೆತ್ತವರು, ಅಣ್ಣಂದಿರು ಖಂಡಿತವಾಗಿ ತನ್ನನ್ನು ನಿರಾಕರಿಸಲಾರರು. ಅಲ್ಲದೆ ತನಗೆ ತಿಳಿದ ಮಟ್ಟಿಗೆ ಅವಳಿಗೆ ತನ್ನಲ್ಲಿರುವ ಸಲುಗೆ ಬೇರೆ ಯಾವ ಹುಡುಗನಲ್ಲೂ ಇಲ್ಲ. ಖಂಡಿತವಾಗಿ ತನಗೂ, ಅವಳಿಗೂ ಒಳ್ಳೆಯ ನೌಕರಿ ಸಿಕ್ಕೇ ಸಿಗುತ್ತದೆ. ಆದರೆ, ಇವಳನ್ನು ಏನೆಂದು ಕೇಳುವುದು? ಕೇಳದೆ ವಿಧಿಯೂ ಇಲ್ಲ. ಪರೀಕ್ಷೆಯ ಫಲಿತಾಂಶ ಬಂದ ತಕ್ಷಣ ಅವಳು ಮುಂದಿನ ಕೋರ್ಸ್‌ಗಳಿಗೆ ಅರ್ಜಿ ಹಾಕಿಯೇ ಹಾಕುತ್ತಾಳೆ. ಅವಳ ಮನೆಯವರೂ ಅದನ್ನು ವಿರೋಧಿಸಲಾರರು. ಶಶಿಕಾಂತ ಯೋಚಿಸಿ ಹುಚ್ಚನಾದ. ಕೊನೆಗೊಂದು ದಿನ ಇದ್ದ ಧೈರ್ಯ ಒಗ್ಗೂಡಿಸಿ ಕಾಲೇಜು ಬಿಟ್ಟ ತಕ್ಷಣ ಬಸ್‌ಸ್ಟಾಂಡಿಗೆ ಅವಳ ಜತೆ ಹೆಜ್ಜೆ ಹಾಕುತ್ತಿರುವಾಗ ಮೆದುವಾಗಿ ಕೇಳಿದ:

'ಸುಜಾತಾ, ಪದವಿ ಮುಗಿಸಿ ಮುಂದೆ ಏನು ಮಾಡಬೇಕೆಂದಿರುವೆ?'

'ಸ್ನಾತಕೋತ್ತರ ಪದವಿಗೆ ಅರ್ಜಿ ಹಾಕುತ್ತೇನೆ. ನನಗೇನೋ ಇಷ್ಟು ಬೇಗ ಓದು ಮುಗಿಸುವುದು ಇಷ್ಟವಿಲ್ಲಪ್ಪ' ಸುಜಾತಾ ತಟ್ಟನೆ ನುಡಿದಳು.

'ನಾನೂ ಅರ್ಜಿ ಹಾಕುತ್ತೇನೆ. ಆದರೆ, ನೀನು ಒಪ್ಪಿದರೆ ಮಾತ್ರ' ತಡವರಿಸುತ್ತಲೇ ಹೇಳಿದ ಶಶಿಕಾಂತ.

ಅರ್ಥವಾಗದ ಅವಳು ಒಂದು ಕ್ಷಣ ನಡಿಗೆಯನ್ನು ನಿಲ್ಲಿಸಿ ಅವನತ್ತ ತಿರುಗಿ ಕೇಳಿದಳು.

'ನನ್ನ ಒಪ್ಪಿಗೆ ಯಾಕೆ?'

'ನಾನು ಅರ್ಜಿ ಹಾಕುವುದು ನಿನ್ನ ಬಳಿ ಸುಜಾತಾ. ನನ್ನ ಅರ್ಜಿಯನ್ನು ನಿರಾಕರಿಸದೆ ನೀನು ನನ್ನ ಬಾಳ ಸಂಗಾತಿಯಾಗಿ ಬರಬೇಕು' ಎಂದು ಹೇಳಿ ತಟ್ಟನೆ ಅವಳ ಕೈ ಹಿಡಿದುಕೊಂಡ.

ಸುಜಾತಾ ಅಪ್ರತಿಭಳಾದಳು. ಅವಳ ಮುಖಕ್ಕೆ ಕೆಂಪು ಓಕುಳಿ ಎರಚಿದಂತಾಯಿತು. ಜೀವನದಲ್ಲಿ ಮೊದಲ ಬಾರಿ ಶಶಿಕಾಂತನ ಎದುರು ಅವಳ ಹೆಣ್ತನ ಎಚ್ಚೆತ್ತುಕೊಂಡು ತಲೆ ಕೆಳಕ್ಕೆ ಬಾಗಿ ಕಣ್ಣುಗಳು ಅವನನ್ನು ಎದುರಿಸಲಾರದೆ ನೆಲವನ್ನು ನೋಡತೊಡಗಿದವು. ಅವನ ಕೈಯೂ ನಡುಗುತ್ತಿತ್ತು. ಮೆಲ್ಲನೆ ತನ್ನ ಕೈಯನ್ನು ಬಿಡಿಸಿಕೊಂಡಳು. ಇಬ್ಬರೂ ಮೆಲ್ಲನೆ ಮುಂದೆ ನಡೆದು ಬಸ್‌ಸ್ಟಾಂಡ್ ಸೇರಿ ಮನೆ ಸೇರಿದರು. ಇಬ್ಬರ ಬಾಯಿಂದಲೂ ಒಂದಕ್ಷರ ಮಾತು ಹೊರಡಲಿಲ್ಲ. ಅವಳು ತನ್ನನ್ನು ಒಪ್ಪುತ್ತಾಳೆ ಎನ್ನುವ ಭರವಸೆ ಶಶಿಕಾಂತನಿಗೆ ಇರಲಿಲ್ಲ. ಅವಳ ನಿರಾಕರಣೆಯನ್ನು ಊಹಿಸಿಯೇ ಅವನು ರಾತ್ರಿ ಎಲ್ಲ ನಿದ್ರೆ ಇಲ್ಲದೆ ಕಳೆದ.

ಇತ್ತ ಸುಜಾತಾಳ ಪರಿಸ್ಥಿತಿ ಅದಕ್ಕಿಂತಲೂ ಕೆಟ್ಟದ್ದಾಗಿತ್ತು.

ಶಶಿಕಾಂತ ಇಷ್ಟು ವರುಷಗಳ ಒಡನಾಡಿಯದರೂ ಆತನ ಬಾಳ ಸಂಗಾತಿಯಾಗುವ ಬಗ್ಗೆ ಅವಳ ತಲೆಯಲ್ಲಿ ಯಾವುದೇ ಆಲೋಚನೆ ಬಂದಿರಲಿಲ್ಲ. ಈಗ ಏಕಾಏಕಿ ಹೀಗೆ ಕೇಳುತ್ತಿದ್ದಾನೆ. ಹಿಂದೆ ಇದರ ಬಗ್ಗೆ ಯಾವುದೇ ಸುಳಿವು ಕೂಡ ಕೊಟ್ಟಿರಲಿಲ್ಲ ಮಹಾರಾಯ! ಏನೆಂದು ಉತ್ತರಿಸಲಿ? ಅವನನ್ನು ಬೇಡವೆಂದು ನಿರಾಕರಿಸಲು ತನ್ನಲ್ಲಿ ಯಾವ ಕಾರಣವೂ ಇಲ್ಲ.